Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 | Issue - 17 | 24th October 2024

## ಮೀಟಿಂಗ್ with ಡಿನ್ನರ್
## ಮತ್ತು
## ಡ್ರಾಮಾ ಪ್ರಾಕ್ಟೀಸ್

ಪ್ರಾಯೋಜಕರು :
Rtn. PP ಶ್ರೀನಾಥ್ ರಾವ್.

**Time : 7.00 p.m.**
**Venue : Forest Guest House,**
**Near B. B. Hegde College, Sangam, Kundapura**

**39th year of Service and Fellowship**

# ವಾರದ ಸಭೆಯ ವರದಿ




ಈ ವಾರದ ಸಭೆಯು ಶಿವಪ್ರಸಾದ್ ಗ್ರಾಂಡ್‌ನಲ್ಲಿ ರೊ. ಶ್ರೀನಿವಾಸ ಶೇಟ್ ಇವರ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಕಾರ್ಯದರ್ಶಿಯವರ ಅನುಪಸ್ಥಿತಿಯಲ್ಲಿ ರೊ. ಸುರೇಖಾ ಪುರಾಣಿಕ್‌ರವರು ವರದಿ ವಾಚಿಸಿದರು. ರೊ. ವಾಸುದೇವ ಕಾರಂತರು ವಾರದ ಚಿಂತನೆಯಲ್ಲಿ ಮಾತ್ರೆ ಚುಚ್ಚುಮದ್ದುಗಳಲ್ಲದೆ ಆರೋಗ್ಯವಾಗಿರುವ ಮದ್ದುಗಳಾವುವು ಎಂದು ತಿಳಿಸಿದರು. ರೊ. ಕೆ ಕೆ ಕಾಂಚನರು ರೋಟರಿ ಮಾಹಿತಿಯನ್ನು ನೀಡಿದರು. ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ IMJISC ಮೂಡ್ಲಕಟ್ಟೆಯ ಉಪ ಪ್ರಾಂಶುಪಾಲರಾದ ಜಯಶೀಲ್ ಕುಮಾರ್‌ರನ್ನು ರೊ. ದೋಮ ಚಂದ್ರಶೇಖರರು ಸಭೆಗೆ ಪರಿಚಯಿಸಿದರು.

ಮುಖ್ಯ ಅತಿಥಿಗಳು ತಮ್ಮ ಉಪನ್ಯಾಸದಲ್ಲಿ ಭಾರತಾಂಬೆಯ ಹೆಮ್ಮೆಯ ಪುತ್ರ ರತನ್ ಟಾಟಾ ಇವರ ಚರಿತ್ರೆ ಯಶೋಗಾಥೆಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು. ರತನ್ ಟಾಟಾರವರು ಭಾರತದ ಆರ್ಥಿಕ ಪ್ರಗತಿಗೆ ಶ್ರಮಿಸಿದವರಲ್ಲಿ ಅಗ್ರಗಣ್ಯರು. ಇವರ ಸರಳತೆ, ಉದಾರತೆ, ದೂರದೃಷ್ಟಿ, ವೃತ್ತಿಪರತೆ, ಸಮಾಜ ಸೇವೆ ಎಲ್ಲರಿಗೂ ಮಾದರಿ ಎಂದರು. ಮುಂದೆ ಟಾಟಾ ಸಂಸ್ಥೆಯ ರೋಚಕ ಚರಿತ್ರೆಯನ್ನು ತಿಳಿಸುತ್ತಾ ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಇಸ್ಲಾಂ ಹಾಗೂ ಬ್ಯಾಬಿಲೋನಿಯ ತುಳಿತಕ್ಕೆ ಒಳಗಾದ ಪರ್ಷಿಯಾದ ಒಂದು ಗುಂಪು ನಿರಾಶ್ರಿತರಾಗಿ ಭಾರತದ ಕಡೆಗೆ ಆಶ್ರಯಕ್ಕಾಗಿ ಗುಜರಾತಿನ ರಾಜನ ಬಳಿ ಬೇಡಿಕೆ ಇಟ್ಟಾಗ ರಾಜಾಶ್ರಯದಿಂದ ನೆಲೆನಿಂತ ಪಾರ್ಸಿ ಸಮುದಾಯಕ್ಕೆ ಸೇರಿದವರೇ ಈ ಟಾಟಾ ಕುಟುಂಬ. ನಸ್ಸೇರ್ವಾಜಿ ಟಾಟಾ ಈ ಟಾಟಾ ಚರಿತ್ರೆಯ ಮೊದಲ ಹರಿಕಾರರು. ಜವಳಿ ಉತ್ಪನ್ನ ಹಾಗೂ ರಫ್ತಿನಲ್ಲಿ ಭಾರತದ ಹೆಸರನ್ನು ಪ್ರಪಂಚದಾದ್ಯಂತ ಹೆಸರಿಸಿದರು. ನಂತರ ಎರಡನೇ ತಲೆಮಾರಿನಲ್ಲಿ ಜೇಮ್ ಶೆಡ್ ಜೀ ಟಾಟಾ ರವರು ಜವಳಿ ಉತ್ಪನ್ನವನ್ನು ಇನ್ನೂ ಅಭಿವೃದ್ಧಿಗೊಳಿಸಿದರು. ಮೂರನೇ ತಲೆಮಾರು ಡೋರಾಬ್ಜಿ ಟಾಟಾರವರು ದೈತ್ಯ ಉಪ್ಪಿನ ಕಾರ್ಖಾನೆಯನ್ನು ಸ್ಥಾಪಿಸಿ ಬ್ರಿಟಿಷರನ್ನು ನಿಬ್ಬೆರಗಾಗಿಸಿದರು. ನಾಲ್ಕನೇ ತಲೆಮಾರಿನ RJD ಟಾಟಾ ಈ ಸಂಸ್ಥೆಯನ್ನು ಮುನ್ನಡೆಸಿದರು. 5ನೇ ತಲೆಮಾರಿನ 1991ರಲ್ಲಿ ಟಾಟಾ ಸಮೂಹ ಸಂಸ್ಥೆಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡವರೇ ರತನ್ ನೋವೆಲ್ ಟಾಟಾ. ದಿವಾಳಿ ಅಂಚಿನಲ್ಲಿದ್ದ ಕಂಪನಿಯನ್ನು ಲಾಭದ ಕಡೆಗೆ ಕೊಂಡೊಯ್ದರು. 1998 ರಲ್ಲಿ ಭಾರತದಲ್ಲಿ ಉತ್ಪಾದಿಸಿದ Nano carನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಪದ್ಮಭೂಷಣ, ಪದ್ಮವಿಭೂಷಣ ಇನ್ನು ಹಲವಾರು ಪ್ರಶಸ್ತಿ ಗೌರವಗಳನ್ನು ಗಳಿಸಿರುವ ಇವರು ಅಂಬಾನಿ, ಅದಾನಿಯರಂತೆ ಶ್ರೀಮಂತರಾದರೂ ಅವರ ಹೆಸರು ಶ್ರೀಮಂತರ ಪಟ್ಟಿಗೆ ಸೇರುವುದಿಲ್ಲ. ಏಕೆಂದರೆ ಅವರ ಹೆಚ್ಚಿನ ಆದಾಯವು ಸಮಾಜ ಸೇವೆಗೆ ಮುಡಿಪಾಗಿತ್ತು. ಭಾರತೀಯರಾದ ನಾವು ಅವರ ದೇಶೀಯತೆ ಹಾಗೂ ಸಾಮಾಜಿಕ ಬದ್ಧತೆಯನ್ನು ಪಾಲಿಸಿದರೆ ಅದೇ ಅವರಿಗೆ ನೀಡುವ ಶ್ರದ್ಧಾಂಜಲಿ ಎಂದರು.

ಅಧ್ಯಕ್ಷರಾದ ರೊ. ಜುಡಿತ್ ಮೆಂಡೋನ್ಸಾರವರು ಒಂದು ಉತ್ತಮವಾದ ಉಪನ್ಯಾಸ ನೀಡಲು ಜಯಶೀಲ ಕುಮಾರರ ಹಾಗೆ ಪೂರ್ವ ತಯಾರಿಯನ್ನು ನಡೆಸಿ ಅಚ್ಚುಕಟ್ಟಾದ ಸಂಪೂರ್ಣ ಮಾಹಿತಿಯನ್ನು ನೀಡುವುದು ಉತ್ತಮ ಎಂದು ಅತಿಥಿಗಳನ್ನು ಶ್ಲಾಘಿಸಿ ಅವರಿಗೆ ಧನ್ಯವಾದಗಳು ಅರ್ಪಿಸಿದರು. ಲಕ್ಕಿ ರೊಟೇರಿಯನ್ ಆಗಿ ಜಯಶೀಲ್ ಕುಮಾರ್ ಆಯ್ಕೆಯಾದರು. ರೊ. ಡಾ. ಉತ್ತಮ ಕುಮಾರ್ ಶೆಟ್ಟಿಯವರ ನಗೆ ಚಟಾಕಿ ಎಲ್ಲರಿಗೂ ಮುದವನ್ನು ನೀಡಿತು. ರೊ. ಮನೋಹರ ಭಟ್‌ರವರು ಧನ್ಯವಾದ ಸಮರ್ಪಣೆಗೈದರು.

# ಟಾಟಾ ಹೇಳಿದ ಜೀವನ ಪಾಠಗಳು



ರತನ್ ಟಾಟಾ ತಮ್ಮ ಜೀವನದ ಬಗ್ಗೆ ಹೇಳಿದ್ದ ಮಾತುಗಳು ನಮಗೆಲ್ಲರಿಗೂ ಸ್ಫೂರ್ತಿ ನೀಡುವಂತಿವೆ:

**1. ನಮ್ಮ ಉನ್ನತಿ, ಅವನತಿ ನಮ್ಮಿಂದಲೇ :**

ಇದು ರತನ್ ಟಾಟಾ ಹೇಳಿದ ಪ್ರಗತಿಯ ಸೀಕ್ರೆಟ್. ಲೋಹಗಳು ತುಕ್ಕು ಹಿಡಿದು ನಾಶವಾಗುತ್ತವೆಯೇ ಹೊರತು ಯಾರಿಂದಲೂ ಹಾಳು ಮಾಡಲು ಸಾಧ್ಯವಿಲ್ಲ. ಹಾಗೆಯೇ ವ್ಯಕ್ತಿಯೊಬ್ಬನ ವ್ಯಕ್ತಿತ್ವ ತನ್ನ ಮನೋಭಾವದಿಂದಲೇ ಹಾಳಾಗಬೇಕೇ ಹೊರತು, ಹೊರಗಿನವರಿಂದ ನಡೆಯುವುದಿಲ್ಲ.

**2. ಟೀಕಾಕಾರಿಂದಲೇ ಬೆಳೆಯಿರಿ :**

ನಮ್ಮ ಮೇಲೆ ಎಸೆಯುವ ಕಲ್ಲುಗಳಿಂದ ಸ್ಮಾರಕವನ್ನು ನಿರ್ಮಿಸುವಂತೆ ನಾವು ಬೆಳೆದುಬಿಡಬೇಕು' ಎಂಬ ಟಾಟಾರ ಮಾತಿನಂತೆ, ಟೀಕಿಸಿದರೆ ನೋಯುವ ಅಗತ್ಯವಿಲ್ಲ. ಅದನ್ನೇ ನಮ್ಮ ಬೆಳವಣಿಗೆಯ ಸೋಪಾನವಾಗಿಸಿಕೊಳ್ಳಬೇಕು.

**3. ಅನುಷ್ಠಾನಿಸಿ :**

ಸರಿಯಾದ ನಿರ್ಣಯಗಳನ್ನು ತೆಗೆದುಕೊಂಡರೆ ಸಾಲದು, ಅವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿಯೂ ಗಮನಹರಿಸಬೇಕು.

**4. ಸೋಲುವ ಭಯ ಬೇಡ** :

ಸೋಲುವ ಭಯವಿದ್ದರೆ ಅದರಿಂದಲೇ ಸೋಲಬಹುದು. ಅದಕ್ಕೇ ರತನ್ ಟಾಟಾ ಹೇಳಿದ್ದು, 'ಗೆಲ್ಲುವ ಏಕೈಕ ಮಾರ್ಗವೆಂದರೆ ಸೋಲುವ ಭಯವನ್ನು ಹೊಂದದೇ ಇರುವುದು'.

**5. ಭಾವನೆಗಳನ್ನು ವ್ಯಕ್ತಪಡಿಸಬೇಡಿ** :

ನಮ್ಮ ಭಾವನೆಗಳನ್ನು ಇದ್ದಂತೆಯೇ ವ್ಯಕ್ತಪಡಿಸುವ ಅಗತ್ಯವಿಲ್ಲ, 'ತನ್ನ ಭಾವನೆಗಳನ್ನು ಜಗತ್ತಿಗೆ ವ್ಯಕ್ತಪಡಿಸದೇ ಇರುವುದೇ ವ್ಯಕ್ತಿಯ ನಿಜವಾದ ಶಕ್ತಿ'.

**6. ಯಶಸ್ಸು ಎಲ್ಲಿದೆ? :**

ಅವಕಾಶಗಳು ಪದೇಪದೆ ಬಾರವು. ಆದರೆ, ಅವು ಬಂದಾಗ ಬಳಸಿಕೊಳ್ಳಬೇಕು. ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವುದರಲ್ಲೇ ಜೀವನದ ಯಶಸ್ಸು ಅಡಗಿದೆ'.

**7. ಏರುಪೇರುಗಳಿರಲಿ :**

ಜೀವನದಲ್ಲಿ ಎದುರಾಗುವ ಏರುಪೇರುಗಳೇ ನಮ್ಮನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸಲಿವೆ ಎಂಬ ಬಲವಾದ ನಂಬಿಕೆ ಹೊಂದಿರಬೇಕು ಎಂದಿದ್ದರು ಟಾಟಾ. ಹೀಗಾಗಿ ಸಾಗುವ ದಾರಿಯಲ್ಲಿನ ಅಡೆತಡೆಗಳಿಗೆ ಬೇಸರಿಸಬಾರದು.

**8.ಆಯ್ಕೆ ನಮ್ಮದು** :

ನಮ್ಮ ನಡೆಯಲ್ಲಿ ಜೊತೆಯಾಗಿ ಇನ್ನೊಬ್ಬರಿರಬೇಕೇ ಬೇಡವೇ? ರತನ್ ಟಾಟಾ ಹೇಳುತ್ತಾರೆ, 'ವೇಗವಾಗಿ ನಡೆಯಲು ಬಯಸಿದರೆ, ಒಬ್ಬರೇ ನಡೆಯಬೇಕು. ಬಹುದೂರ ನಡೆಯುವ ಆಯ್ಕೆ ನಿಮ್ಮದಾಗಿದ್ದರೆ ಒಟ್ಟಾಗಿ ನಡೆಯಬೇಕು.

---



ತಾ.19/10 ರ ಶನಿವಾರದಂದು ರೊ. ಸತ್ಯನಾರಾಯಣ ಪುರಾಣಿಕರು ತಮ್ಮ ಹುಟ್ಟುಹಬ್ಬವನ್ನು ಹೋಟೆಲ್ ಹರ್ಷ ಡಿಲಕ್ಸ್ (ಹೋಟೆಲ್ ಶರೋನ್) ನಲ್ಲಿ ಬೆಳಗಿನ ಉಪಹಾರವನ್ನು ರೋಟರಿ ಮಿತ್ರರೊಡಗೂಡಿ ಸಂಭ್ರಮದಿಂದ ಆಚರಿಸಿದರು. ಕ್ಲಬ್‌ನ ಸದಸ್ಯರು ಅತಿ ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಂಡು ಸಂತೋಷದಿಂದ ರೊ. ಸತ್ಯನಾರಾಯಣ ಪುರಾಣಿಕರಿಗೆ ಶುಭಾಶಯವನ್ನು ಕೋರಿದರು.

